ಸಿಸಿ ನಂ.308/2023 ಪಿಡಬ್ಲೂ :1

ದಿನಾಂಕಃ 20-02-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ಪಿ ಜಿ ಹೆಚ್ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಅಧಿಕಾರ ಪತ್ರವನ್ನು ನಿಪಿ-1, ಚೆಕ್ ನಿಪಿ-2 ಎಂದು, ಆರೋಪಿಯ ಸಹಿ 2(ಎ) ಎಂದು , ಬ್ಯಾಂಕಿನ ಹಿಂಬರಹ ನಿಪಿ-3 ಎಂದು, ವಕೀಲರ ಕಚೇರಿಯ ನೋಟಿಸಿನ ಪ್ರತಿ ನಿಪಿ-4 ಎಂದು, ಅಂಚೆ ರಸೀದಿ ನಿಪಿ-5 ಎಂದು, ಅಂಚೆ ಸ್ವೀಕೃತಿ ನಿಪಿ-6 ಎಂದು, ಸಾಲದ ಅರ್ಜಿಯ ಯಥಾ ನಕಲನ್ನು ನಿಪಿ-7 ಎಂದು, ಸಾಲ ಮಂಜೂರಾತಿ ಪತ್ರದ ಯಥಾ ನಕಲನ್ನು ನಿಪಿ-8 ಎಂದು, ಸಾಲದ ಕರಾರು ಪತ್ರದ ಯಥಾ ನಕಲನ್ನು ನಿಪಿ-9 ಎಂದು, ಡಿಮಾಂಡ್ ಪ್ರಾಮಿಸರಿ ನೋಟಿನ ಯಥಾ ನಕಲನ್ನು ನಿಪಿ -10 ಎಂದು, ಸಾಲದ ಹಣವನ್ನು ಸಾಲಗಾರರ ಉಳಿತಾಯ ಖಾತೆಗೆ ಜಮಾ ಮಾಡಿದ ಅಧಿಕಾರ ಪತ್ರವನ್ನು ನಿಪಿ-11 ಎಂದು, ರಸೀದಿಯನ್ನು ನಿಪಿ-12 ಎಂದು, ಫಿರ್ಯಾದು ಬ್ಯಾಂಕನಿಂದ ಸಾಲಗಾರರಿಗೆ ನೀಡಿದ ನೋಟಿಸಿನ ಯಥಾ ನಕಲನ್ನು ನಿಪಿ-13 ಎಂದು, ಸರ್ಟಿಫಿಕೇಟ್ ನ ಯಥಾ ನಕಲನ್ನು ನಿಪಿ-14 ಎಂದು, ಸಾಲದ ಖಾತಾ ಉತಾರನ್ನು ನಿಪಿ-15 ಎಂದು ಗುರುತಿಸಲಾಯಿತು.

(ಸಾಕ್ಷಿ ನಿಪಿ-7 ರಿಂದ ನಿಪಿ- 13ರ ದಾಖಲಾತಿಗಳ ಮೂಲ ಪ್ರತಿಗಳನ್ನು ಹಾಜರು ಪಡಿಸಿದ್ದು ನೋಟರೈಜ್ ಪ್ರತಿಯೊಂದಿಗೆ ತಾಳೆ ಮಾಡಿ ನೋಡಲಾಗಿ ಸರಿ ಇದ್ದು ಮೂಲ ಪ್ರತಿಗಳನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು. )

( ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.